

ಗುಹಾಲಯ ಮೊದಲ ಅಂತಸ್ತಿಗೆ
ಹೋಗಲು ಮೆಟ್ಟಿಲುಗಳ ದಾರಿ

# ಕಾರ್ಲಾ

## ಕಲ್ಲುಬಂಡೆಯ ಕಲಾಗಾರ

ಮಹಾರಾಷ್ಟ್ರದ ಅಜಂತಾ ಹಾಗೂ ಎಲ್ಲೋರಾ ಮಾದರಿಯಲ್ಲಿಯೇ ಕಾರ್ಲಾದಲ್ಲಿ ಗುಹಾಂತರ ದೇವಾಲಯ ಇದೆ. ಕಾರ್ಲಾದ ಈ ಗುಹಾಂತರ ದೇವಾಲಯ ಚೈತ್ಯಗೃಹ ಎಂದೇ ಗುರುತಿಸಿಕೊಂಡಿದೆ.

★ ಚಿತ್ರ-ಲೇಖನ: ಚಂದ್ರಕಾಂತ ಮಸಾನಿ

ಪುಣೆ– ಮುಂಬೈ ನಡುವಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಗಿದರೆ ಪುಣೆಯಿಂದ 60 ಕಿ.ಮೀ. ಅಂತರದಲ್ಲಿ ಬೃಹದಾಕಾರದ ಬೆಟ್ಟವೊಂದು ಕಾಣುತ್ತದೆ. ಅದುವೇ ಕಾರ್ಲಾ ಬೆಟ್ಟ. ಇದು ಪುರಾತನ ಗುಹೆಗಳಿಂದಾಗಿಯೇ ಪ್ರಸಿದ್ಧಿ ಪಡೆದಿದೆ.

ಕ್ರಿ.ಶ.3ನೇ ಶತಮಾನದಲ್ಲಿ ಬೌದ್ಧ ಬಿಕ್ಕುಗಳು ಕಪ್ಪು ಬಂಡೆಕಲ್ಲುಗಳನ್ನು ಕೊರೆದು ಗುಹಾಂತರ ದೇವಾಲಯ ನಿರ್ಮಾಣ ಮಾಡಿದ್ದಾರೆ. ಶಿಲೆಯಲ್ಲಿನ ಅದ್ಭುತ ಕಲೆಗಳನ್ನು ಹತ್ತಿರದಿಂದ ವೀಕ್ಷಿಸಿದರೆ ಮಾತ್ರ ಕಲಾ ಶ್ರೀಮಂತಿಕೆಯ ಅರಿವು ಮೂಡುತ್ತದೆ. ಕಪ್ಪು ವರ್ಣದ ಶಿಲೆಯಲ್ಲಿ ಅರಳಿರುವ ಕಲಾಕೃತಿಗಳು ಎಂಥವರನ್ನೂ ಬೆರಗುಗೊಳಿಸುತ್ತವೆ.

ಮಹಾರಾಷ್ಟ್ರದ ಅಜಂತಾ ಹಾಗೂ ಎಲ್ಲೋರಾ ಮಾದರಿಯಲ್ಲಿಯೇ ಕಾರ್ಲಾದಲ್ಲಿ ಗುಹಾಂತರ ದೇವಾಲಯ ಇದೆ. ಕಾರ್ಲಾದ ಈ ಗುಹಾಂತರ ದೇವಾಲಯ ಚೈತ್ಯಗೃಹ ಎಂದೇ ಗುರುತಿಸಿಕೊಂಡಿದೆ. ಶಾತವಾಹನರ ಕಾಲದಲ್ಲಿ ಗುಹಾಂತರ ದೇವಾಲಯ ನಿರ್ಮಾಣಗೊಂಡಿರಬಹುದು ಎನ್ನುವುದು ಇತಿಹಾಸ ತಜ್ಞರ ಅಭಿಪ್ರಾಯ.

ಲೋನಾವಳಾ ಹಾಗೂ ಖಂಡಾಳಾದ ಗಿರಿಧಾಮ ಪ್ರದೇಶದಲ್ಲಿ ಕ್ರಿ.ಪೂ. 2ನೇ ಶತಮಾನದಲ್ಲಿ ಬುದ್ಧನ ಅನುಯಾಯಿಗಳು ವಾಸವಾಗಿದ್ದರು. ದೇಶದ ಇತರ ಗುಹಾಂತರ ದೇವಾಲಯಗಳ ವಿನ್ಯಾಸಕ್ಕೆ ಹೋಲಿಕೆ ಮಾಡಿದರೆ ಭಾರತದಲ್ಲಿ ಈವರೆಗೆ ಪತ್ತೆಯಾಗಿರುವ ಗುಹಾಂತರ ದೇವಾಲಯಗಳಲ್ಲಿಯೇ ಇದು ದೊಡ್ಡದು.

ಹೆದ್ದಾರಿ ಬದಿಯ ಭಾಜಾ ಗ್ರಾಮದಿಂದ ಸ್ವಲ್ಪ ಅಂತರದಲ್ಲಿಯೇ ಇರುವ